**ಸಿ.ಸಿ.ನಂ.:**426/2025

ಪಿ.ಡಬ್ಲ್ಯೂ:1

(ಇಂದು ದಿನಾಂಕಃ **17-04-2026** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲು –ಆರೋಪಿ ಪರ ಕುಮಾರಿ. ಪಿ.ಎಚ್.ಕೆ. ವಕೀಲರಿಂದ**

1. ನಮ್ಮ ಫಿರ್ಯಾದಿ ಸಂಸ್ಥೆಯಲ್ಲಿ ಸಾಲವನ್ನು ನೀಡುವ ಪೂರ್ವದಲ್ಲಿ ಸಾಲಗಾರರು ಹಾಗೂ ಜಾಮೀನುದಾರರು ಇಬ್ಬರು ಸಹ ಸದಸ್ಯತ್ವವನ್ನು ಪಡೆದುಕೊಂಡಿರಬೇಕು ಎಂದರೆ ಸರಿ. ಸದ್ರಿ ಸಂದರ್ಭದಲ್ಲಿ ನಾವು ಕೆ ವಾಯ್ ಸಿ ಗೆ ಸಂಬಂಧಿಸಿದ ದಾಖಲಾತಿಯನ್ನು ಪಡೆದುಕೊಳ್ಳುತ್ತೇವೆ ಎಂದರೆ ಸರಿ. ಸದಸ್ಯತ್ವವನ್ನು ಪಡೆಯಲು ಆಡಳಿತ ಮಂಡಳಿಯ ಠರಾವಿನ ಅವಶ್ಯಕತೆ ಇರುವುದಿಲ್ಲ. ಸಾಮಾನ್ಯವಾಗಿ ಸದಸ್ಯರು ಸದಸ್ಯತ್ವವನ್ನು ಪಡೆದ ಎಷ್ಟು ದಿನಗಳ ನಂತರ ಸಾಲಕ್ಕಾಗಿ ಅರ್ಜಿಯನ್ನು ಸಲ್ಲಿಸಬಹುದು ಎಂದರೆ ಸಾಕ್ಷಿಯು ಸದಸ್ಯತ್ವವನ್ನು ಪಡೆದ ಕೂಡಲೇ ಅವರಿಗೆ ಸಾಲದ ಅವಶ್ಯಕತೆ ಕಂಡು ಬಂದಾಗ ಅರ್ಜಿಯನ್ನು ಸಲ್ಲಿಸಬಹುದು ಎಂದು ನುಡಿಯುತ್ತಾರೆ.

2. ನಮ್ಮ ಫಿರ್ಯಾದಿ ಸಂಸ್ಥೆಗೆ ನಮ್ಮದೇ ಆದ ಬೈಲಾಗಳು ಇವೆ. ನಮ್ಮ ಸಹಕಾರಿಯ ನಿಯಮದ ಪ್ರಕಾರವೇ ನಾವು ಸಾಲಗಾರರಿಗೆ ಸಾಲವನ್ನು ನೀಡುತ್ತೇವೆ. ನಮ್ಮ ನಿಯಮಾವಳಿಗಳ ಪ್ರಕಾರ ಸಾಲಕ್ಕಾಗಿ ಅರ್ಜಿಯನ್ನು ನಮ್ಮ ಆಡಳಿತ ಮಂಡಳಿಯ ಸಭೆಯ ಎರಡು ದಿನಗಳ ಪೂರ್ವದಲ್ಲಿ ಸಲ್ಲಿಸಬೇಕಾಗುತ್ತದೆ. ಸಾಲಕ್ಕಾಗಿ ಅರ್ಜಿಯನ್ನು ಸಲ್ಲಿಸಿದವರ ವಿವರಗಳ ಕುರಿತಾಗಿ ನಾವು ನಮ್ಮ ಆಡಳಿತ ಮಂಡಳಿಯ ನಿರ್ದೇಶಕರು ಹಾಗೂ ಸದಸ್ಯರಿಗೆ ಯಾವುದೇ ನೊಟೀಸನ್ನು ನೀಡುವುದಿಲ್ಲ. ಸಾಲವನ್ನು ಮಂಜೂರು ಮಾಡುವುದು ನಿರ್ದೇಶಕರ ಆದೇಶದಂತೆ ಆಗಿರುತ್ತದೆ.

**ಸಿ.ಸಿ.ನಂ.:**426/2025

ಪಿ.ಡಬ್ಲ್ಯೂ:1

3. ನಿಪಿ7 ನಮ್ಮ ಫಿರ್ಯಾದಿ ಸಂಸ್ಥೆಯ ನಮೂನೆ ಆಗಿರುತ್ತದೆ. ನಿಪಿ7 ರಲ್ಲಿ ಕೆಲವೊಂದು ಕಾಲಂಗಳನ್ನು ಭರಣ ಮಾಡಬೇಕಾಗುತ್ತದೆ. ನಿಪಿ7 ರ 2ನೇ ಪುಟದಲ್ಲಿ ಯಾವುದೇ ಕಲಂಗಳನ್ನು ಭರಣ ಮಾಡಲಿಲ್ಲ ಎಂದರೆ ಸಾಕ್ಷಿಯು ಸದ್ರಿ ಕಲಂಗಳು ಈ ಪ್ರಕರಣದ ಸಾಲಕ್ಕೆ ಅವಶ್ಯಕತೆ ಇಲ್ಲದೇ ಇರುವುದರಿಂದ ಭರಣ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ 7 ರಲ್ಲಿ ವಾಸ್ತವ್ಯದ ಮನೆಯ ಕುರಿತಾದ ಮಾಹಿತಿ ಹಾಗೂ ಸಾಲಗಾರರ ಆದಾಯಗಳನ್ನು ಭರಣ ಮಾಡುವ ಅವಶ್ಯಕತೆ ಇರುವುದಿಲ್ಲ. ಯಾವುದೇ ಒಂದು ಸಾಲವನ್ನು ಮಂಜೂರು ಮಾಡುವಾಗ ಸಾಲಗಾರನ ಆದಾಯದ ಮಿತಿಯ ಮೇರೆಗೆ ಮಂಜೂರು ಮಾಡುತ್ತಾರೆ.

4. ಸಾಲವನ್ನು ಸಾಲಗಾರರು ಸಾಲವನ್ನು ಪಡೆದುಕೊಳ್ಳುವ ಪೂರ್ವದಲ್ಲಿ ಅವರು ಬೇರೆ ಸಂಸ್ಥೆಯಲ್ಲಿ ಸಾಲವನ್ನು ಹೊಂದಿರುತ್ತಾರೆ ಎಂಬ ಬಗ್ಗೆ ನೋಡಿಕೊಳ್ಳಬೇಕು ಎಂದರೆ ಸಾಕ್ಷಿಯು ನಮ್ಮ ಫಿರ್ಯಾದಿ ಸಂಸ್ಥೆಯಲ್ಲಿ ಸಿವಿಲ್ ಸ್ಕೋರ ಅನ್ವಯವಾಗುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ7 ರಲ್ಲಿ ಸದ್ರಿ ಸಾಲದ ಅರ್ಜಿಯನ್ನು ನಾನು ಪರಿಶೀಲನೆ ಮಾಡಿದ ಕುರಿತಾಗಿ ಯಾವುದೇ ವಿಚಾರಗಳು ಇಲ್ಲ ಎಂದರೆ ಆಡಳಿತ ಮಂಡಳಿಯ ಸಭೆಯಲ್ಲಿ ಇಟ್ಟ ಕುರಿತಾಗಿ ಇಲ್ಲ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆ.ಪ್ರ.ದ.ನ್ಯಾ.ದಂ. ಕುಮಟಾ